5242(6167) ಶ್ರೀ ಬೋಪಯ್ಯ ಕೆ.ಜಿ. (ಮಡಿಕೇರಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ಪ್ರವಾಸೋದ್ಯಮ ಯೋಜನೆಯಡಿ ನಡೆಸುತ್ತಿರುವ ಹೋಟೆಲುಗಳಿಗೆ ರಿಯಾಯ್ತಿ ದರದಲ್ಲಿ ಪೂರೈಕೆ ಮಾಡುತ್ತಿದ್ದುದು ನಿಜವೇ;

ಆ) ಈಗ ಕೆ.ಇ.ಬಿ.ಯು ಕಂಪನಿಗಳಾಗಿ ಪರಿವರ್ತಿತವಾದ ಮೇಲೆ ಈ ರಿಯಾಯ್ತಿಯನ್ನು ರದ್ದುಗೊಳಿಸಿರುವುದಕ್ಕೆ ಕಾರಣವೇನು;

ಇ) ಹಾಗಿದ್ದಲ್ಲಿ, ಈ ವಿಚಾರದ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಹೌದು, ನಿಜ

ಆ) ರಾಜ್ಯದಲ್ಲಿ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು 1999 ರಿಂದ ಅಸ್ತಿಸ್ತದಲ್ಲಿದ್ದು, ಎಲ್ಲಾ ವರ್ಗಗಳ ವಿದ್ಯುತ್ ಬಳಕೆದಾರರಿಗೆ ವಿದ್ಯುತ್ ದರಗಳನ್ನು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ನಿಗದಿಪಡಿಸುತ್ತಿದೆ. ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ಅಸ್ತಿತ್ವಕ್ಕೆ ಬಂದ ನಂತರ 2000, 2002 ಮತ್ತು 2003ರ ವರ್ಷಗಳಲ್ಲಿ ವಿದ್ಯುತ್ ದರಗಳ ನಿಗದಿ ಬಗ್ಗೆ ಆದೇಶಗಳನ್ನು ನೀಡಿದ್ದು, ಈ ಆದೇಶಗಳಲ್ಲಿ, ಕರ್ನಾಟಕ ಪ್ರವಾಸೋದ್ಯಮ ಯೋಜನೆಯಡಿ ನಡೆಸುತ್ತಿರುವ ಹೋಟೆಲುಗಳಿಗೆ ರಿಯಾಯ್ತಿ ದರದಲ್ಲಿ ವಿದ್ಯುತ್ ಪೂರೈಕೆ ಮಾಡುವ ಬಗ್ಗೆ ಯಾವುದೇ ಅವಕಾಶವಿರುವುದಿಲ್ಲ. ಹೀಗಾಗಿ ಈ ಸ್ಥಾವರಗಳಿಗೆ ವಿದ್ಯುತ್ ಸರಬರಾಜು ಕಂಪನಿಗಳ ವಿದ್ಯುತ್ ದರಗಳಲ್ಲಿ ಯಾವ ರಿಯಾಯಿತಿಯನ್ನು ನೀಡುತ್ತಿಲ್ಲ.

ಇ) ಯಾವುದೇ ಇಲಾಖೆ/ಸಂಸ್ಥೆಯು ವಿದ್ಯುತ್ ದರದಲ್ಲಿ ರಿಯಾಯಿತಿಯನ್ನು ಬಯಸಿದಲ್ಲಿ ಅಂತಹ ಇಲಾಖೆ/ಸಂಸ್ಥೆಯು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ ಮನವಿಯನ್ನು ಸಲ್ಲಿಸಬಹುದಾಗಿದೆ.

5243(6168) ಶ್ರೀ ಬೋಪಯ್ಯ ಕೆ.ಜಿ (ಮಡಿಕೇರಿ) ಮಾನ್ಯ ಪ್ರವಾಸೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುರವರೆ ?

ಅ) ಕರ್ನಾಟದ ಪ್ರವಾಸೋದ್ಯಮ ನಿಗಮದ ವತಿಯಿಂದ ನಡೆಸುತ್ತಿರುವ ಹೋಟೆಲುಗಳಿಗೆ ಈ ಹಿಂದೆ ನೀಡುತ್ತಿದ್ದ ತೆರಿಗೆ ವಿನಾಯಿತಿಯನ್ನು ರದ್ದುಗೊಳಿಸಿರುವುದಕ್ಕೆ ಕಾರಣಗಳೇನು;

ಆ) ಪ್ರವಾಸೋದ್ಯಮ ನಿಗಮದ ವತಿಯಿಂದ ನಡೆಸುತ್ತಿರುವ ಹೋಟೆಲುಗಳಿಗೆ ವ್ಯಾಟಿನಿಂದ ವಿನಾಯಿತಿ ನೀಡುವಂತೆ ಹೊಟೆಲ್ ಉದ್ಯಮಿಗಳಿಂದ ಮನವಿ ಬಂದಿದೆಯೇ;

ಇ) ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರದ ತೀರ್ಮಾನವೇನು ;

ಶ್ರೀ ಡಿ.ಟಿ. ಜಯಕುಮಾರ್ (ಪ್ರವಾಸೋದ್ಯಮ ಸಚಿವರು) :

ಅ) ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಯಾವುದೇ ಹೋಟೆಲ್‌ಗೆ ತೆರಿಗೆ ವಿನಾಯಿತಿ ಇರಲಿಲ್ಲ ಹಾಗೂ ವಾಣಿಜ್ಯ ತೆರಿಗೆಯನ್ನು ಪಾವತಿ ಮಾಡುತ್ತಿದ್ದೇವೆ.

ಆ) ಪ್ರವಾಸೋದ್ಯಮ ನಿಗಮದ ವತಿಯಿಂದ ನಡೆಸುತ್ತಿರುವ ಹೋಟೆಲ್ ಉದ್ಯಮಿಗಳಿಂದ ವ್ಯಾಟ್‌ನಿಂದ ವಿನಾಯಿತಿ ನೀಡುವಂತೆ ಯಾವ ಮನವಿಯೂ ಇದುವರೆವಿಗೆ ಬಂದಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.